# ಔಷಧವಾಗಿ ಪರಿಮಳ ಪಾರಿಜಾತ

ಮನೆಯಂಗಳದಲ್ಲಿ ಬೆಳೆಯುವ ಪರಿಮಳದ ಹೂವು ಪಾರಿಜಾತ, ಸುಂದರವಷ್ಟೇ ಅಲ್ಲ, ಔಷಧೀಯ ಗುಣವನ್ನೂ ಹೊಂದಿದೆ.

ಚಿತ್ರ-ಲೇಖನ: ಸಹನಾ ಕಾಂತಬೈಲು





ಪಾರಿಜಾತ ಹೂ ಸುಂದರವಷ್ಟೇ ಅಲ್ಲ, ಔಷಧೀಯ ಗುಣವನ್ನೂ ಹೊಂದಿದೆ. ಇದರ ನವುರಾದ ಪರಿಮಳ ಮನವನ್ನು ಮುದಗೊಳಿಸುತ್ತದೆ.

ಕವಿಗಳನ್ನು, ಕಲಾರಸಿಕರನ್ನು, ಸೌಂದರ್ಯ ಪ್ರೇಮಿಗಳನ್ನು ಒಮ್ಮೆಗೆ ಆಕರ್ಷಿಸುವ ಹೂ ಪಾರಿಜಾತ. ಓಲಿಯೇಸೀ ಕುಟುಂಬಕ್ಕೆ ಸೇರಿದ ಸಸ್ಯವಿದು. ನಿಕ್ಟ್ಯಾತಸ್ ಆರ್ಬರ್ ಟ್ರಸ್ಟಿಸ್ (.) ಇದರ ಶಾಸ್ತ್ರೀಯ ಹೆಸರು. ಪಾರಿಜಾತದ ತವರು ಭಾರತ.

ಪಾರಿಜಾತ ಮಧ್ಯಮ ಗಾತ್ರದ ಪೊದರು ಅಥವಾ ಚಿಕ್ಕಮರ. ಎಲೆಯ ಮೇಲ್ಭಾಗ ಒರಟಾಗಿದ್ದು ಸವರಿದರೆ ಮುಳ್ಳು ಮುಟ್ಟಿದ ಅನುಭವವಾಗುತ್ತದೆ. ಬೇಸಿಗೆಯಲ್ಲಿ ಎಲೆಗಳು ಉದುರಿ ಮಳೆಗಾಲದ ಹೊತ್ತಿಗೆ ಮತ್ತೆ ಚಿಗುರೊಡೆಯುತ್ತವೆ.

ಮಲ್ಲಿಗೆಯನ್ನೇ ಹೋಲುವ ಪಾರಿಜಾತ ಹೂಗಳು ಗೊಂಚಲುಗಳಲ್ಲಿ ಅರಳುತ್ತವೆ. ಹೂವಿನ ತೊಟ್ಟು ಮಾತ್ರ ಹವಳಗೆಂಪಿನ ಬಣ್ಣವನ್ನು ಹೊಂದಿದೆ. ಮುಟ್ಟಿದರೆ ಬಾಡುವ ಹೂಗಳು ಬಹಳ ಮೃದು. ಇದರ ನವುರಾದ ಸುಗಂಧ ಮನವನ್ನು ಮುದಗೊಳಿಸುತ್ತದೆ. ಪಾರಿಜಾತ ಸಂಜೆಯ ಹೊತ್ತಿಗೆ ಅರಳಿ ರಾತ್ರಿ ಇಡೀ ಪರಿಮಳ ಬೀರಿ ಬೆಳಗಾಗುವುದರೊಳಗೆ ಉದುರಿ ಹೋಗುತ್ತದೆ. ಈ ವೃಕ್ಷವನ್ನು ಭೂಲೋಕಕ್ಕೆ ಮಹಾಭಾರತದ ಶ್ರೀಕೃಷ್ಣನು ತನ್ನ ಪ್ರಿಯತಮೆ ಸತ್ಯಭಾಮೆಯ ಪ್ರೀತಿಗಾಗಿ ಸ್ವರ್ಗದಿಂದ ಕದ್ದು ತಂದನೆಂದು ಪುರಾಣ ಕಥೆಗಳು ಹೇಳುತ್ತವೆ. ಆದರೆ ಸತ್ಯಭಾಮೆಯ ಮನೆಯಂಗಳದಲ್ಲಿ ನೆಟ್ಟ ಗಿಡದ ಹೂಗುಗಳು ಮಾತ್ರ ರುಕ್ಮಿಣಿಯ ಅಂಗಳಕ್ಕೆ ಬೀಳುತ್ತಿದ್ದುದರಿಂದ ಸವತಿಯರ ಮಧ್ಯೆ ಆಗಾಗ್ಗೆ ಜಗಳವಾಗುತ್ತಿತ್ತಂತೆ!



ಈ ಗಿಡವನ್ನು ಬೀಜಗಳಿಂದ ಮತ್ತು ಕಾಂಡದಿಂದ ಅಭಿವೃದ್ಧಿಪಡಿಸಬಹುದು. ಇದನ್ನು ಎಲ್ಲಾ ತರದ ಮಣ್ಣಿನಲ್ಲಿ ಬೆಳೆಯಬಹುದಾಗಿದೆ. ದೇವಾಲಯದ ಅಂಗಳ, ಮನೆಯಂಗಳ, ಸಾರ್ವಜನಿಕ ಉದ್ಯಾನ.. ಹೀಗೆ ಎಲ್ಲಾ ಕಡೆ ಪಾರಿಜಾತವನ್ನು ಬೆಳೆಸುತ್ತಾರೆ. ಹೂಗಳನ್ನು ದೇವರ ಪೂಜೆಗೆ ಬಳಸುತ್ತಾರೆ.

ಪಾರಿಜಾತ ಔಷಧೀಯ ಗುಣಗಳನ್ನೂ ಹೊಂದಿದೆ. ಇದರ ಎಲೆಗಳು ಪಿತ್ತಹರ ಹಾಗೂ ಕಫನಿವಾರಕ. ಎಲೆಯ ರಸ ಕಹಿ ಮತ್ತು ಘಾಟು. ಜ್ವರ ಹಾಗೂ ಸಂಧಿವಾತ ರೋಗಗಳನ್ನು ಉಪಶಮನ ಮಾಡುತ್ತದೆ. ಪಾರಿಜಾತ ಹೂವಿನಿಂದ ಸುಗಂಧವನ್ನು ತಯಾರಿಸುತ್ತಾರೆ.

ಮನೆಯ ಮುಂದೊಂದು ಪಾರಿಜಾತ ಗಿಡವಿದ್ದರೆ ಹೂವರಳಿದಾಗ ಪರಿಸರವೆಲ್ಲ ಪರಿಮಳದಿಂದ ಕೂಡಿರುತ್ತದೆ. ಎಲ್ಲರ ಪ್ರೀತಿಪಾತ್ರವಾದ 'ಪಾರಿಜಾತ' ಚೆಲುವಿನ ಖನಿ.

■